ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ,
ಮೈಸೂರು-570017
Telephone No: 0821-2343384

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,CESC, Mysore-570017
Web Site: www.cescmysore.org.
E-Mail: gmhrd@cescmysore.org

Company Identity Number[CIN]:- U40109KA2004SGC035177

**ಪೀಠಿಕೆ:**

- ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ/ಅಧಿಕಾರಿಗಳ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯನ್ನು 2014-15ನೇ ಸಾಲಿನಿಂದ ಆಯಾ ವಿದ್ಯುತ್ ಸರಬರಾಜು ಕಂಪನಿಗಳೇ ಸ್ವತಂತ್ರವಾಗಿ ಜಾರಿಗೊಳಿಸಿ ನಿರ್ವಹಿಸುವ ಬಗ್ಗೆ ನಿರ್ದೇಶಕರು(ಆ ಮತ್ತು ಮಾ.ಸಂ) ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ಇವರ ಪತ್ರ ಸಂಖ್ಯೆ:ಕವಿಪ್ರನಿನಿ/ಔ.ಬಾ/ಹಿಸ7/11153/2009-10 ದಿನಾಂಕ:26.12.2013.
- ಈ ಹಿನ್ನೆಲೆಯಲ್ಲಿ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯನ್ನು 2014ರಿಂದ ಚಾವಿಸನಿನಿಯಲ್ಲಿ ಜಾರಿಗೊಳಸಲಾಗಿದೆ.
- 2020-21ನೇ ಸಾಲಿನ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯಡಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರಿಗೆ ಅಪಘಾತದಿಂದ ಮರಣ/ಅಶಕ್ತತೆ ಸಂಭವಿಸಿದ್ದಲ್ಲಿ ಪರಿಹಾರವಾಗಿ ಗರಿಷ್ಠ ರೂ. ಹತ್ತು ಲಕ್ಷ ಮೊತ್ತವನ್ನು ಪಾವತಿಸಲು ಮೆ॥ ಇಫ್ಕೋ ಟೋಕಿಯಾ, ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್‌ರವರ ವತಿಯಿಂದ ವಿಮಾ ಪಾಲಸಿಯನ್ನು ಕಾರ್ಯಾದೇಶ ಆದೇಶ ಸಂಖ್ಯೆ:ಚಾವಿಸನಿನಿ/ಪ್ರವ್ಯ(ಖರೀದಿ)/ಉಪ್ರವ್ಯ/ಸಪ್ರವ್ಯ/2020-21/ಸಿವೈಎಸ್-1051 ದಿನಾಂಕ:13.11.2020ರಲ್ಲಿ ದಿನಾಂಕ:14.11.2020 ರಿಂದ 13.11.2021ರ ಅವಧಿಗೆ ಪಡೆಯಲಾಗಿರುತ್ತದೆ.
- ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ನೀಡಲಾಗಿದೆ.

ಸಂಖ್ಯೆ:ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ-2/ cys-1228 ದಿನಾಂಕ: 09 DEC 2020

**ಆದೇಶ**

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರ ಪರವಾಗಿ ಮೆ॥ ಇಫ್ಕೋ ಟೋಕಿಯಾ, ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಇವರಿಗೆ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯ ಅಡಿಯಲ್ಲಿ ವಾರ್ಷಿಕ ವಿಮಾ ಕಂತಿನ ಒಟ್ಟು ಮೊತ್ತ 31,48,514/-(ಮುವತ್ತೊಂದು ಲಕ್ಷದ ನಲವತ್ತೆಂಟು ಸಾವಿರದ ಐದು ನೂರ ಹದಿನಾಲ್ಕು ಮಾತ್ರ)ಗಳನ್ನು ಮುಂಗಡವಾಗಿ ಪಾವತಿಸಲಾಗಿರುತ್ತದೆ.

- ➢ ವೈಯಕ್ತಿಕ ಅಪಘಾತ ಗುಂಪು ವಿಮಾ ಯೋಜನೆಯ ಅಡಿಯಲ್ಲಿ ಮಾರಣಾಂತಿಕ/ಮಾರಣಾಂತಿಕವಲ್ಲದ ಅಪಘಾತ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಅಧಿಕಾರಿ/ನೌಕರರುಗಳಿಗೆ ಈ ಕೆಳಕಂಡ ಸೌಲಭ್ಯಗಳು ಒಳಗೊಂಡಿರುತ್ತವೆ.

| Sl.No. | Nature | Amount in Rs. |
|---|---|---|
| 1 | Death Only | 10,00,000 |
| 2 | Loss of two limbs two eyes or one limb and one eye | 10,00,000 |
| 3 | Loss of one limb or one eye | 5,00,000 |
| 4 | Permanent Total Disablement (PTD) from Injuries other than those named above | 10,00,000 |

ಪು.ತಿ.ನೋ.

- ವಿಮಾ ಪಾಲಿಸಿಯ ಅವಧಿಯು ದಿನಾಂಕ:14.11.2020ರಿಂದ 13.11.2021ರವರೆಗೆ ಚಾಲ್ತಿಯಲ್ಲಿರುತ್ತದೆ.
- <u>**ವಾರ್ಷಿಕ ವಿಮಾ ಕಂತಿನ ಒಟ್ಟು ಮೊತ್ತ ರೂ. 467/-**</u> (ನಾಲ್ಕು ನೂರ ಅರವತ್ತೇಳು ಮಾತ್ರ)ಗಳನ್ನು ಚಾವಿಸನಿನಿಯ ಎಲ್ಲಾ ಅಧಿಕಾರಿ/ನೌಕರರುಗಳಿಂದ ಡಿಸೆಂಬರ್ 2020ರ ಮಾಹೆಯ ವೇತನದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಕಡ್ಡಾಯವಾಗಿ ಮುರಿಕೆ ಮಾಡುವುದು.
- ವೇತನ ಬಟವಾಡೆ ಅಧಿಕಾರಿಗಳು ಮುರಿಕೆ ಮಾಡಿದ ಮೊತ್ತದ ಡಿ.ಡಿ.ಯನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂತರಿಕ ನಿರ್ವಹಣೆ) ನಿಗಮ ಕಛೇರಿ ಮೈಸೂರು ರವರಿಗೆ ಸಂದಾಯವಾಗುವಂತೆ ಕಳುಹಿಸುವುದು.
- ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಂಪನಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ನೌಕರರು/ಅಧಿಕಾರಿಗಳ ವೇತನದಲ್ಲಿ ಮುರಿಕೆ ಮಾಡಿದ ವಾರ್ಷಿಕ ವಿಮಾ ಕಂತಿನ ವಿವರಗಳನ್ನು ಕೆಳಕಂಡ ನಮೂನೆಯಲ್ಲಿ ಭರ್ತಿ ಮಾಡಿ "Hard Copy & Soft Copy" ಯನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ) ನಿಗಮ ಕಛೇರಿ ಮೈಸೂರು ರವರಿಗೆ ಖುದ್ದಾಗಿ ದಿನಾಂಕ:05.01.2021ರ ಒಳಗಾಗಿ ತಲುಪಿಸುವುದು ಹಾಗೂ ಮೆದು ಪ್ರತಿಯನ್ನು (soft copy) <u>aoadminco@ gmail.com</u> ಮತ್ತು <u>gmhrd@cescmysore.org</u> ಗೆ ಇ-ಮೇಲ್ ಮೂಲಕ ಕಳುಹಿಸುವುದು.

<u>**ಕಛೇರಿಯ ಹೆಸರು:**</u>

| ಕ್ರ.ಸಂ. | ಅಧಿಕಾರಿ/ನೌಕರರ ಹೆಸರು | ಜನ್ಮ ದಿನಾಂಕ | ಪ್ರಸ್ತುತ ಹುದ್ದೆ | ಕಡಿತಗೊಳಿಸಿದ ವಿಮಾ ಮೊತ್ತ | ನಾಮಿನಿ ಹೆಸರು | ನಾಮಿನಿ ಜೊತೆಗಿನ ಸಂಬಂಧ |
|---|---|---|---|---|---|---|
| | | | | | | |
| | | | | | | |
| | | | | | | |

- ಕಂಪನಿ/ವಲಯ/ವೃತ್ತ/ವಿಭಾಗ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಅಪಘಾತದಿಂದ ಮರಣ/ಅಶಕ್ತತೆ ಸಂಭವಿಸಿದ್ದಲ್ಲಿ ವಿಮಾ ಮೊತ್ತವನ್ನು ತ್ವರಿತವಾಗಿ ಪಾವತಿಸಲು ಅನುವಾಗುವಂತೆ ಕಂಪನಿ/ವಲಯ/ವೃತ್ತ/ವಿಭಾಗದ ಅಧಿಕಾರಿಗಳು ಕೂಡಲೇ ಈ ಕಛೇರಿಗೆ ಹಾಗೂ ಮೆ॥ ಇಫ್ಕೋ ಟೋಕಿಯಾ, ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್‌ರವರಿಗೆ ಮಾಹಿತಿಯನ್ನು ತಪ್ಪದೇ ರವಾನಿಸುವುದು ಹಾಗೂ ವೇತನ ಬಟವಾಡೆ ಅಧಿಕಾರಿಗಳು ಗುಂಪು ವಿಮಾ ಯೋಜನೆಯಡಿಯಲ್ಲಿ ಪರಿಹಾರದ ಮೊತ್ತವನ್ನು ಮೆ॥ ಇಫ್ಕೋ ಟೋಕಿಯಾ, ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಇವರಿಂದ ಪಡೆಯಲು ನಿಗಧಿತ ನಮೂನೆಯಲ್ಲಿ ಈ ಕೆಳಕಂಡ ಪೂರಕ ದಾಖಲಾತಿಗಳೊಂದಿಗೆ ಸಲ್ಲಿಸಿ ವಿಮಾ ಮೊತ್ತ ಪಾವತಿಗೆ ಕ್ರಮ ತೆಗೆದುಕೊಳ್ಳುವುದು. ತಪ್ಪಿದಲ್ಲಿ ವಿಳಂಬ ಕ್ರಮದಿಂದಾಗಿ/ಮಾಹಿತಿಯಿಂದಾಗಿ ಸಂಭವಿಸಬಹುದಾದ ಕಾನೂನು ತೊಡಕುಗಳಿಗೆ ಹಾಗೂ ನಷ್ಟಗಳಿಗೆ ಸಂಬಂಧಪಟ್ಟ ಅಧಿಕಾರಿಗಳೇ ನೇರ ಜವಾಬ್ದಾರರಾಗಿರುತ್ತಾರೆ.
- ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವಿಮಾ ಕಂಪನಿಯನ್ನು ಸಂಪರ್ಕಿಸುವುದು.

  <u>**ವಿಮಾ ಕಂಪನಿಯ ವಿಳಾಸ:**</u>

  ಮೆ॥ ಇಫ್ಕೋ ಟೋಕಿಯಾ, ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್,
  # 35, ಮೊದಲನೇ ಮಹಡಿ, ನ್ಯೂ ಕಾಂತರಾಜ್‌ಅರಸ್ ರಸ್ತೆ,
  ಅಕ್ಷಯ ಭಂಡಾರ ಎದುರು, ಕುವೆಂಪುನಗರ, ಮೈಸೂರು-570 023.
- **ಮಾರಣಾಂತಿಕ/ಮಾರಣಾಂತಿಕವಲ್ಲದ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಸಲ್ಲಿಸಬೇಕಾದ ದಾಖಲೆಗಳು:**

  1. **Claim form** duly filled with details fo Accident with company signature and seal.
  2. **Death Certificate** by Panchayat/Municipality/Corporation/Hospital if died in Hospital (Originals).
  3. **Post-Mortem Report-** Atested by Doctor/Police with seal (Originals).

**ಮುಂದುವರೆದು...**

ಮುಂದುವರೆದು...

R.prakash

4. **First Information Report (FIR), Panchanama, Inquest Report-** Attested by police with seal (Originals).
5. **Vamsharuksha/Legalheir Certificate.**
6. **Bank Details-** Cancelled cheque leaf or if cheque book does not contain the name of the insured then Pass Book top sheet containing details of Claimant Name, A/C No., Bank Name and Branch, IFSC Code.
7. **Incident Report.**
8. **Newspaper cutting-** Xerox color, spot photo of the accident (if available).
9. **Photos.**
10. **Details of the Employee-** Employee No., Designation, Employee ID card copy.
11. **Hospital Records-** Original i.e., Case sheet- Death Summary/Discharge summary (if died in Hospital) attested by Hospital Doctor with seal (Original).
12. **Complaint letter-** Attested by police with seal.
13. **Final Investigation Report/Charge sheet-** Attested by S I (Originals).
14. **Driving Licence/RC** (if the deceased is driving).

**ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ.**

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಚಾವಿಸನಿನಿ., ನಿಗಮ ಕಛೇರಿ, ಮೈಸೂರು.

**ಪ್ರತಿಗಳು:**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಾರ್ಯಾಲಯ, ಚಾವಿಸನಿನಿ., ಮೈಸೂರು ಇವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್(ವಿ)/ಲೆಕ್ಕನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ., ಮೈಸೂರು/ಹಾಸನರವರ ಮಾಹಿತಿಗಾಗಿ.
- ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರುರವರ ಮಾಹಿತಿಗಾಗಿ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ., ರವರ ಮಾಹಿತಿಗಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿರವರ ಮಾಹಿತಿಗಾಗಿ ಹಾಗೂ ಆದೇಶದಲ್ಲಿ ತಿಳಿಸಿರುವಂತೆ ಅಗತ್ಯ ಕ್ರಮವಹಿಸುವುದು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ.ನಿ), ನಿಗಮ ಕಾರ್ಯಾಲಯ, ಚಾವಿಸನಿನಿ., ಮೈಸೂರುರವರ ಮಾಹಿತಿಗಾಗಿ ಹಾಗೂ ಆದೇಶದಲ್ಲಿ ತಿಳಿಸಿರುವಂತೆ ಅಗತ್ಯ ಕ್ರಮವಹಿಸುವುದು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಚಾವಿಸನಿನಿ., ಮೈಸೂರು ವೆಬ್‌ಸೆಟ್‌ನಲ್ಲಿ ಪ್ರಕಟಿಸಲು.
- ಮೆ|| ಇಫ್ಕೋ ಟೋಕಿಯಾ, ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್, # 35, ಮೊದಲನೇ ಮಹಡಿ, ನ್ಯೂ ಕಾಂತರಾಜ್‌ಅರಸ್ ರಸ್ತೆ, ಅಕ್ಷಯ ಭಂಡಾರ ಎದುರು, ಕುವೆಂಪುನಗರ, ಮೈಸೂರು-570 023 ಇವರ ಮಾಹಿತಿಗಾಗಿ.
- ಆಪ್ತ ಕಾರ್ಯದರ್ಶಿಗಳು, ವ್ಯ.ನಿ/ನಿ(ತಾಂ)/ಮು.ಆ.ಅ ರವರ ಮಾಹಿತಿಗಾಗಿ.
- ಹಿಸ-2(ಆ ಮತ್ತು ಮಾ.ಸಂ)/ಪ್ರ.ಕ.